ಮೈಸೂರು ಡಿಸ್ಟ್ರಿಕ್ಟಿನಲ್ಲಿಯ ಇದರಡಿ ಕಂಡ ಯೆಲ್ಲಾ ಫಾರೆಸ್ಟ್ಗಳಿಂದಾಗಲಿ ಯಾ ಯಾವದಾದರೊಂದು ಫಾರೆಸ್ಟಿನಿಂದಾಗಲಿ ಆವುಗಳಿಗೆ ಯಾ ಅದಕ್ಕೆ ಬಾಜೂದಲ್ಲಿ ಕಾಣಿಸುವ ಡಿಪೋಗಳಿಗೆ 1886ನೇ ಇಸವಿ ಮಾರ್ಚಿ 31ನೇ ಮಕ್ತುಂ ವರಿಗೆ ನಾಟುಗಳನ್ನೂ ಚೌಬೀನೆಗಳನ್ನೂ ಭಂಡಿ ಮೇಲೆ ಸಾಗಿಸುವ ಬಗ್ಗೆ ದರಖಾಸ್ತುಗಳು ಅಪೇಕ್ಷಿಸಲ್ಪಡುತ್ತವೆ.

ಫಾರೆಸ್ಟು.		ಡಿಪೋಗಳು.
ಭಂಡಿಪುರ ಫಾರೆಸ್ಟು	..	ಹರಿಗಲಾ
		ಗುಂಡಲ್‌ಪೇಟೆ
		ಮೈಸೂರು ವುಡ್‌ಯಾರಡು.
ಬೋರೆಂಬಾಡಿ ಡಿಟೋ	..	ಮುದ್ದೂರು
		ಗುಂಡಲ್‌ಪೇಟೆ
		ಮೈಸೂರು ವುಡ್‌ಯಾರಡು
ಆಯನೂರು ಮೂರಿಗುಡಿ	..	ಡಿಟೋ
ಕಾಕನಕೋಟೆ ಡಿಟೋ	..	ಡಿಟೋ
		ನಿಸೆನಿ
		ಅಂತರಸಂತೆ
ಮತ್ತಿಕುಪ್ಪ ಡಿಟೋ	..	ಮೈಸೂರು ವುಡ್‌ಯಾರಡು
		ಹುಣಸೇಕುಪ್ಪೆ
		ಅಂತರಸಂತೆ

2. ಯೆಲ್ಲ ದರಖಾಸ್ತುಗಳೂ "ಮೈಸೂರು ಡಿಸ್ಟ್ರಿಕ್ಟಿನಲ್ಲಿ ಸ್ಟೇಟ್ ಫಾರೆಸ್ಟುಗಳಿಂದ ಡಿಪೋಗಳಿಗೆ ನಾಟೂ ವ ಚೌಬೀನೆಗಳನ್ನು ಭಂಡೀ ಮೇಲೆ ಸಾಗಿಸುವ ಬಗ್ಗೆ ದರಖಾಸ್ತು" ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

3. ಮೇಲ್ಕಂಡ ದರಖಾಸ್ತುಗಳು 1885ನೇ ಇಸವಿ ಏಪ್ರಿಲ್ 16ನೇ ಮಕ್ತುಂ ವರಿಗೆ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಸೂಪರ್ಟಿಂಡೆಂಟರವರಿಂದ ತೆಗದುಕೊಳ್ಳಲ್ಪಡುವದು; ಮತ್ತು ಸದರೀ ತಾರೀಖಿನಲ್ಲಿ ಅವುಗಳು ಅವರ ಆಫೀಸಿನಲ್ಲಿ ವಿಲೇವಾರಿ ಬಗ್ಗೆ ಖುಲ್ಲಾ ಮಾಡಲ್ಪಡುವವು.

4. ದರಖಾಸ್ತು ಮ್ಹಾಡಲು ಪುದ್ದೀಶಿಸುವ ಕಂಟ್ರಾಕ್ಟುದಾರ್ರು ಮೇಲ್ಕಂಡ ಫಾರೆಸ್ಟುಗಳಿಂದ ಅವುಗಳ ಬಾಜೂದಲ್ಲಿ ಕಾಣಿಸುವ ಡಿಪೋಗಳಿಗೆ ನಾಟೂ ಯಾ ಚೌಬೀನೆಯನ್ನು ಭಂಡಿ ಮೂಲಕ ಸಾಗಿಸುವದಕ್ಕೆ ತಾವು ಅಪೇಕ್ಷಿಸುವ ಕಮ್ಮೀ ದರವನ್ನು ನಮೂದಿಸತಕ್ಕದ್ದು.

5. ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಸೂಪರ್ಟಿಂಡೆಂಟರಿಂದ ಮೈಸೂರು ಮೊಕ್ಕಾಂ ಅವರ ಆಫೀಸಿನಲ್ಲಿ ದರಖಾಸ್ತು ಮಾಡಲಿಚ್ಛೆ ವುಳ್ಳ ಕಂಟ್ರಾಕ್ಟುದಾರರು ಇತರ ತಪಸೀಲ್‌ಗಳನ್ನು ಖುದ್ದಾಗಿ ಕೇಳಿ ತಿಳಿದುಕೊಳ್ಳಬಹುದು.

ಸಿ. ನಾರಾಯಣರಾವ,
ಫಾರೆಸ್ಟ್ ಸೂಪರ್ಟಿಂಡೆಂಟ್.

ಹಾಸನ ಡಿಸ್ಟ್ರಿಕ್ಟು.

ತಾರೀಖು ನೇ ಜನವರೀ 1885.

ಇದರಿಂದ ಪ್ರಕಟಪಡಿಸುವದೇನಂದರೆ, ಸ್ಞ 1878ನೇ ಇಸವಿ ಜೂ 8ನೇ ಮಕ್ತುಮಿನ ಫಾರೆಸ್ಟು ರೂಲ್ಸಿನ ವೈಕಿ 13ನೇ ರೂಲಿನ ನಿಬಂಧನೆಗಳನುಸರಿಸಿ, ಇದರಡಿ ಕಂಡ ಸ್ಟೇಟ್ ಫಾರೆಸ್ಟುಗಳು ಮತ್ತು ಪ್ಲಾಂಟೇಷ್ಣಗಳು ಸ್ಞ 1885ನೇ ಇಸವಿ ಜನವರೀ ಲಾಗಾಯಿತು ಜೂ ತಿಂಗಳವರಿಗೆ ಯೆಲ್ಲಾ ತರಗತಿಯ ಬೇಟೆಗಾರರಿಗೂ ಮತ್ತು ಸದರೀ ಫಾರೆಸ್ಟುಗಳ ಆಸಪಾಸಿನಲ್ಲಿರುವ ದರೋಬಸ್ತು ಪ್ಲಾಂಟರುಗಳಿಗೂ ಬಂದು ಮಾಡಲ್ಪಟ್ಟಿವೆ:—

1. ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ವಿಜಾಪುರದ ಪ್ಲಾಂಟೇಷ್ನ
1. ಹಾಸನ ಸಬ್ ಡಿವೀಜ್ನನಲ್ಲಿರುವ ಭಕ್ತರವಳ್ಳಿ ಪ್ಲಾಂಟೇಷ್ನ
1. ಡಿಟೋ ಹಿರೆಕಲ್‌ಗುಡ್ಡದ ಫಾರೆಸ್ಟು
1. ಡಿಟೋ ಅಣ್ಣೆಪಟ್ಟಿದ ಫಾರೆಸ್ಟು
1. ಹಾಸನಸಬ್ ಡಿವೀಜ್ನನಲ್ಲಿರುವ ಕೆಂಪುಹೊಳೆಫಾಟು
1. ಡಿಟೋ ಕಬ್ಬಿನಲ್ಲಾ ಫಾಟು
1. ಡಿಟೋ ಬಿಸಲೆ ಫಾಟು
1. ಹಾಗನೆರೆ ಫಾಟು

ಜೆ. ಸ್ಟೀವೆನ್ಸ್,
ಸಬ್ ಅ॥ ಕ್ವಾರ್ಟರ್‌ವೇಟರ್ ಆಫ್ ಫಾರೆಸ್ಟ್ಸ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ತಾರೀಖು 22ನೇ ಜನವರೀ 1885.

ಯಾದಾಸ್ತು ಸ್ಯ 1884ನೇ ಇಸವಿ ಡಿಸಂಬರ್ ತಾರೀಖು 18ನೇ ರಾತ್ರಿ ತೀರ್ಥಹಳ್ಳಿ ತಾಲ್ಲೂಕು ಮಂಡಗದ್ದೆ ಮಾಗಣಿ ತುಂಡನರದ ವಾಸಸ್ಥ ಬ್ರಾಹ್ಮಣಜಾತಿ ಸುಬ್ರಾಯರ ಮನೆಯಲ್ಲಿ ಕಳವಾಗಿ ಹೋಗಿದ್ದೆಂದು ಫಿರ್ಯಾದಿ ಸುಬ್ಬರಾಯನು ಬರೆದ ಮಾಲ್‌ಪಟ್ಟಿ, ತಾರೀಖು 21—12—84ನೇ ಇಸವಿ.

ಭಂಗಾರದ ಬಾಬತು.

ನಂಬರ್.	ರೂ.	ಆ.	ದ್ರೈ.
1. ಭಂಗಾರದ ಬಾಬತು ಜೋಡಿಳೆ ವೊಡಧಾರ, ಹಳೆ ಯಿಕ್ಕೇರಿ ನಾಣ್ಯ ಬಾಬತು ತೂಕ ಗೊತ್ತಿಲ್ಲಾ ಸುಮಾರು ಅಂದಾಜು ಕ್ರಯ	400	0	0
2. ವಂದೆಳೆ ಗುಂಡು ಸರ 1ಕ್ಕೆ 60 ಗುಂಡು ಯಿರಬಹುದು, ಜೊಕ್ಕ ಭಂಗಾರ ಸುಮಾರು ಕ್ರಯ ..	150	0	0
3. ಭಂಗಾರದ ಬಾಬತು ರಾಗಟಿ 3, ಬಣ್ಣ ತೂಕ ಗೊತ್ತಿಲ್ಲಾ ಸುಮಾರು ಕ್ರಯ ದೊಡ್ಡದು 3 ಸಂಣದು 1 ಪೈಕಿ ದೊಡ್ಡ ರಾಗಟಿಗೆ ಮಾತ್ರ ತಾಂಬ್ರದ ತಗಡು ಹಾಕಿದೆ, ಸಂಣದಕ್ಕೆ ಯಾವದೂ ಬಾಬತು ತಗಡು ಹಾಕಿದೆ ಯೋ ಗೊತ್ತಿಲ್ಲಾ.	60	0	0
4. ಜವರಿ 2, ಪೈಕೀ ಮೂರು ವರಹಾ ತೂಕದ್ದು 1, 15 ವರಹಾ ತೂಕದ್ದು 1 ಬಂಣ ಗೊತ್ತಿಲ್ಲಾ ..	32	0	0
5. ಜಡೆಹುವ್ವೆ ವಂದು ಇದಕ್ಕೆ ವಂಬತ್ತು ಹುವ್ವು ಯಿದೆ, ತೂಕ ಗೊತ್ತಿಲ್ಲಾ ಹುವ್ವುಗಳಿಗೆ ಬೆಳ್ಳೀ ತಗಡು ಕಟ್ಟಿದೆ ತಗಡು ಭಂಗಾರ	150	0	0
6. ಅಡ್ಡಕ್ಯಾದಿಗೆ ವಂದು, ಹಳೆ ಯಿಕ್ಕೇರಿ ಬಂಣ, ತೂಕ 3 ವರಹಾ, ಇದಕ್ಕೆ ತೂಕ ಬಂಣದ ಬ್ಯೈ ವಿಳಾಸ ಯಿರಬಹುದು.	15	0	0
7. ಚಂದ್ರಕ್ಯಾದಿಗೆ 1, ತೂಕ 5 ವರಹಾ ಯಿದರಲ್ಲಿ ಬಂಣದ ಬ್ಯೈ ವಿಳಾಸ ಇರಬಹುದು	30	0	0
8. ಕಮಲದ ಹುವ್ವು ವಂದು, ಬಂಣ ಯಿಕ್ಕೇರಿ, 3 ವರಹಾ ತೂಕ ಯಿದೆ ಬೆಳ್ಳೀ ತಗಡು ಕಟ್ಟಿದೆ.	18	0	0
9. ತಿರುಪಿನ ಹುವ್ವು 5, ಬಂಣ ಹಳೆ ಯಿಕ್ಕೇರಿ, ತೂಕ ಗೊತ್ತಿಲ್ಲಾ 2 ಹುವ್ವಿಗೆ ಬೆಳ್ಳೀ ತಗಡು 3 ಹುವ್ವಿಗೆ ತಾಂಬ್ರದ ತಗಡು ಕಟ್ಟಿದೆ ವಂದೊಂದು ಹುವ್ವು 4 ವರಹ ತೂಕ ಯಿರಬಹುದು. ..	100	0	0
10. ಸಂಣ ಹುಡಗರಿಗೆ ಮುಂದಲೆಗೆ ಹಾಕತಕ್ಕ ಹುವ್ವು 1, ಬಂಣ ಹೊಸ ಯಿಕ್ಕೇರಿ, ಬೆಳ್ಳೀತಗಡು ಹಾಕಿತ್ತು	5	0	0
11. ದ್ವಾರೆ 2ರ ಪೈಕಿ 1 ಜೊತೆ 17 ವರಹ ತೂಕ ವಂದು 20 ವರಹ ತೂಕ ತಗಡು ಭಂಗಾರ ..	222	0	0
12. ಬಳಕೆ ಜೊತೆ 2ರ ಪೈಕೀ 1ಕ್ಕೆ ಬೆಳ್ಳೀ ಸಲಿಗೆ ಮತ್ತೊಂದಕ್ಕೆ ತಾಂಬ್ರದ ಸಲಿಗೆ ಸುತ್ತಿ ಯಿಧೆ ಯರಡರಿಂದ 20 ಗುಂಡು, ಹವಳ 24, ಹಳೆ ಯಿಕ್ಕೇರಿ ಬಂಣ ತಗಡು ಭಂಗಾರ ವಂದೊಂದು ಗುಂಡು ವಂದೊಂದು ವರಹ ತೂಕ ಯಿರಬಹುದು, ವಂದು ಜೊತೆಯಲ್ಲಿ ವಂದು ಗುಂಡಿನ ಭಂಗಾರ ಸುಲದು ಯಿದೆ	100	0	0
13. ಯೇಳು ಯಳೆ ಕಡಾಣಿ 2, ಬಂಣ ತಗಡು ಭಂಗಾರದ್ದು, ವಂದು ಹಳೆ ಯಿಕ್ಕೇರಿದು ಯರಡರಿಂದ 40 ವರಹ ತೂಕ ಸುಮಾರು 700 ಗುಂಡು ಯಿರಬಹುದು, ಇದರ ಕಣೆ ಅಡ್ಡಿಕೆ ನಾಲ್ಕು ಕಡಾಣಿ ದುಂಡು 1 ಗುಂಡು1 ಕಡಾಣಿ ಗುಂಡುಗಳಿಗೆ ಬಾಯಿಕಂಬಿ ಯಿದೆ.	220	0	0
14. ಐದುಯಳೆ ಕಡಾಣಿ 2, ಹಳೆ ಯಿಕ್ಕೇರಿ ಬಂಣ ಸುಮಾರು 600—700 ಗುಂಡು ಯಿರಬಹುದು ಅಡ್ಡಿಕೆ ಯರಡರಿಂದ 4 ಯಿದೆ ಸುಮಾರು 15 ವರಹ ತೂಕ ಯಿರಬಹುದು.	150	0	0

		ರೂ.	ಆ.	ಪೈ
15.	ಗೆಜ್ಜೆ ಅಡ್ಡಿಕೆಗಳು 2 ಅಡ್ಡಿಕೆಗಳು ಗೊತ್ತಿಲ್ಲಾ, ಪೈಕಿ 6 ವರಹ ತೂಕದ್ದು 1 ಹತ್ತು ವರಹ ತೂಕದ್ದು 1 ಗುಂಡು ಸಹ ಯಿರುತ್ತದೆ, ಪೈಕಿ 6 ವರಹ ತೂಕದ ಅಡ್ಡಿಕೆಗೆ ಗುಂಡು ಯಿಲ್ಲಾ	80	0	0
16.	ವಂಕಿ ಸಂಣದು 1, ಹಳೆ ಯಿಕ್ಕೇರಿ ಯಿದರಲ್ಲಿ ವಂದು ಸರಿಗೆ ಮುರದು ಯಿದೆ 6 ವರಹ ತೂಕ ..	30	0	0
17.	ವಾಲೆ ಜೊತೆ 1, ಗಿಣಿಹಚ್ಚಿದ್ದು, ವಾಲೆ 1ರ ಮೂರು ಚಳತುಂಬು 15 ವರಹ ವಾಲೆ ಚಳತುಂಬು 3 ಸುತ್ತಿದೆ ಮುತ್ತು ಸುತ್ತಿದೆ ಯಂಟು ಕೆಂಪು ಕಿಡಿಕುಂಡ್ರಿದೆ ಯರಡಕ್ಕು ಮುತ್ತಿನ ಸರಪಣಿ ಯಿದೆ ಸರಪಣಿಗೂ ಭಂಗಾರದ ಗುಂಡಿನಿಂದ 10 ಕಿಡಿ ಕುಂಡ್ರಿಸಿದೆ, ಬಂಣ ಕುರಜಾತು ಗಟ್ಟಿತಗ್ಗಿನವುಲ್	200	0	0
18.	ಗಿಣಿ ಹಚ್ಚಿದ ವಾಲೆ ಜೊತೆ 1 ಗಟ್ಟದ ಕೆಳಗಿನ ವಾಲು 15 ವರಹ ತೂಕ ಚಳತುಂಬು 6 ಬಂಣ ಕುರಜಾತ್ತು ತಗಡು ಮಿಕ್ಕ ಚಳತುಂಬಿಗೆ ಮುತ್ತು ಯಿದೆ.	75	0	0
19.	ವಾಲೆ ಜೊತೆ 1 ಗಿಣಿಹಚ್ಚಿದ್ದು ಚಳತುಂಬು ಜೊತೆ 1 ಮುತ್ತು ಸುತ್ತಿಯಿದೆ 12 ವರಹ ಬಂಣಕು ರೆಜಾತ್ತು	70	0	0
20.	ವುತ್ಸವಮಾಟದ ವಾಲೆ ಜೊತೆ 1 ತೂಕ ಗೊತ್ತಿಲ್ಲಾ ಚಳತುಂಬಿನ ಜೊತೆ 1 ಮುತ್ತು ವಂದೊಂದು ಯಿದೆ ಬಂಣ ಗೊತ್ತಿಲ್ಲಾ ಹಳೆನಗ	25	0	0
21.	ಡಿಟೋ ವಾಲೆ ಜೊತೆ 1 ಡಿಟೋ ಮೇರಿಗೆ ಯಿದೆ	25	0	0
22.	ಡಿಟೋ ಬಾಬತು ವಾಲೆ ಜೊತೆ ಡಿಟೋ ಮೇರಿಗೆ	25	0	0
23.	ಚಳತುಂಬಿನ ಜೊತೆ 3 ತೂಕ 6 ವರಹ, ಬಂಣ ತಗಡು ಮುತ್ತು ಹಚ್ಚಿ ಯಿಲ್ಲಾ. ..	36	0	0
24.	ಹಿಂಬಳೆ ಜೊತೆ 2ರ ಪೈಕಿ 1ಕ್ಕೆ ಹುವ್ವು ಯಿದೆ ಬಂಣ ತಗಡು ಹಳೆ ಯಿಕ್ಕೇರಿ ಮಿಕ್ಕ ತೂಕ 36½ವರಹ.	216	0	0
25.	ಮುಖರ 3 ಮುತ್ತು ಕುಂಡ್ರಿಸಿದೆ ಪೈಕಿ 1ಕ್ಕೆ ಕೆಂಪುಕಿಡಿ ಕುಂಡ್ರಿಸಿದೆ 3½ ವರಹ ತೂಕ ಭಂಗಾರವಿದೆ.	71	0	0
26.	ಬಂದಿ ಸರಿಗೆ 2 ತಾಳಿ ಸಮೇತ ಪೈಕೀ ವಂದು 12 ವರಹ ತೂಕ ಮತ್ತೊಂದು 7 ವರಹ ತೂಕ ಬಂಣ ಹಳೆ ಯಿಕ್ಕೇರಿ ಹುವ್ವು ಕುಂಡ್ರಿಸಿದೆ.	100	0	0
27.	ಗೋಲು ವುಂಗ್ರ ನಾಲ್ಕು ಅಪ್ಪಟ್ಟ ಬಾಬತು 6 ವರಹ ತೂಕ ಬಂಣ ಸವರನ್ನು. ..	30	0	0
28.	ನರತಬೀಜ ಬಾಬತು ವುಂಗ್ರ 1 ವರಹ ತೂಕ ಸವರನ್ನು.	15	0	0
29.	ಪಟ್ಟಿ ಬಾಬತು ವುಂಗರ 1 ವರಹ ತೂಕ, ಬಂಣ ಸವರನ್ನು	7	0	0
30.	ವಜ್ರದ ವುಂಗ್ರ 1, ಬಂಣ ಹೊಸ ಯಿಕ್ಕೇರಿ, ವಜ್ರದ ಹರಳು ತೂಕ 1½ ವರಹ. ..	18	0	0
31.	ಗೋಮೇಧಿಕ ವುಂಗ್ರ 1, 1½ ವರಹ ತೂಕ ಗೋಮೆಧಿಕ ಕೆಂಪಗೆ ಹೊಳಿಯುತ್ತಾ ಯಿದೆ ..	10	0	0
32.	ಶಾವಂತಿಗೆ ಹುವ್ವಿನ ವುಂಗ್ರ 12 ವರಹ ತೂಕ, ಸುಮಾರು ಕೆಂಪು ಹರಳು 7—8 ಯಿರಬಹುದು ..	20	0	0
33.	ಸಾಲಿ ಗ್ರಾಮದ ವುಂಗ್ರ 3 ವಂದೊಂದು 3 ವರಹ ತೂಕ ಬಂಣ ಹಳೆ ಯಿಕ್ಕೇರಿ. ..	45	0	0
34.	ನಾಣ್ಯದ ವುಂಗ್ರಗಳು 3 ವುಂಗರ 1ರ ನಾಣ್ಯ ಕೂಡ ನಾಲ್ಕು ವರಹ ತೂಕ	60	0	0
35.	ಪವಿತ್ರದ ವುಂಗ್ರ 2ರಿಂದ ತೂಕ 7 ವರಹ ಬಂಣ ಸವರ್ನ	35	0	0
36	ಬೆಳ್ಳೀ ಚಾಪಿನ ವುಂಗ್ರ ಬೆಳ್ಳೀ ವಿನಹ 2½ ವರಹ ತೂಕ ಬಂಣ ಹಳೆ ಯಿಕ್ಕೇರಿ	10	0	0
37.	ತೋಳಸಲಿಗೆ 1, 15 ವರಹ ತೂಕ ಬಂಣ ಹಳೆ ಯಿಕ್ಕೇರಿ ವಂದು ಮಡಿತೆ ಮಾಡಿದೆ ..	75	0	0
38.	ಗಾಲಿ ವಂಟಿ ಜೊತೆ 1 ನೀಲದ ಹರಳು ಹಚ್ಚಿದ್ದು ತೂಕ ½ ವರಹ ನೀಲದ ಹರಳು ನಾಲ್ಕು ಯರಡು ಹರಳು ಕೂಡಿಸಿದೆ	22	0	0
39.	ಕ್ಯಾದಿಗೆ ಚಳತಂಬು ಹರಳು ಕೆತ್ತಿದೆ ಮುತ್ತು ಸುತ್ತಿದೆ	100	0	0
40.	ಕ್ಯಾದಿಗೆ ಯಸಳು ಬಿಳಿ ಹರಳು ಕೂಡಿಸಿವೆ	50	0	0
41.	ಮುತ್ತಿನ ಸರ 4 ತರಹೇದಾರಿ ಮುತ್ತುಗಳು	32	0	0
42.	ಕೊಡಲಿ ಬಾಬತು ಬಾವಲಿ ಮೂರು ಜೊತೆ, ಜೊತೆ ವಂದಕ್ಕೆ ಮೂರು ವರಹ ತೂಕ ..	36	0	0
43.	ಪಾಟ್ಲ ಹುವ್ವಿನ ಬಾವಲಿ 3 ಜೊತೆ 1ರ 10 ರೂಪಾಯಿ ಬಾಳಬಹುದು ಪೈಕಿ 1ರ ಮೇಲಿನ ಕುಸರು ಮುರದು ಯಿದೆ	30	0	0
44.	ಯಲೆಬಾವಲಿ 3 ಜೊತೆ 1ಕ್ಕೆ ಯರಡುವರಹ ತೂಕ ಮುತ್ತು ಸುತ್ತಿದೆ	24	0	0
45.	ಕೋತ್ತಂಬರಿ ಬಾವಲಿ ಜೊತೆ ಹವಳ ಸುತ್ತಿದೆ, ...	10	0	0

ಬೆಳ್ಳೀ ಬಾಬತು ನಗಗೆಳು.

46.	ಕಾಲಸರ ಗೆಜ್ಜೆ ಸಮೇತ ಯಿದ್ದ ಜೊತೆ 2ಕ್ಕೆ	75	0	0
47.	ಪಾವಗದ ಜೊತೆ	20	0	0
48.	ಹುಡಗರು ಹಾಕಿಕೊಳ್ಳುವ ಗೆಜ್ಜೆ ಪಾವಗದ ಜೋಡಿ 1 ಮುಂಪಾಗ ಜೊತೆ 1 ಗೆಜ್ಜೆ ಸಹಾ ..	24	0	0
49.	ಗಂಜಸರು ಹಾಕುವ ಡಾಬು 2 ತೂಕ ಗೊ[illegible]	72	0	0
50.	ವೈಡೂರ 2, ವೈಕಿ ಹದಿನಾರು ರೂಪಾಯಿ ತೂಕದ್ದು 1, ಹದಿನಾಲ್ಕು ರೂಪಾಯಿ ತೂಕದ್ದು 1, ಜೋಡು ಯಳೆ ಬಾಬತು.	30	0	0
51.	ಬೆಳ್ಳೀ ಮುಖಾಮು ಪಂಚಪಾತ್ರೆ 1 ಬೊಂನೆ 1 ಪಂಚಪಾತ್ರೆ ತೂಕ 16, ಬೊಂನೆ ತೂಕ 6 ..	22	0	0
52.	ಸಂಣ ಹುಡಗರಿಗೆ ಹಾಕುವ ಬೆಳ್ಳೀ ಸರಪಣಿ 1, ತೂಕ 24 ರೂಪಾಯಿ ಸಂಣ ಗಂಟಿ 2 ಸರಪಣಿಗೆ ಯಿದ್ದದ್ದು.	24	0	0
53.	ಗಿಡ್ಡಕುಂಪಣಿ ರೂಪಾಯಿ ರಾಜಾ ರೂಪಾಯಿ ಕೂಪ 50	50	0	0
54.	ಸರಕಾರದ ಹಣವಿಗೋಸ್ಕರ ಕೆಂಪು ಗೀರಿನ ಪಂಚೆಯುಲ್ಲಿ ಕಟ್ಟಿ ಹಿತ್ತಾಳೆ ತಪ್ಪಲೆಯಲ್ಲಿ ಯಿಟ್ಟದ್ದು ಪಂಚೆ ಹಿತ್ತಾಳೆ ತಪ್ಪಲೆ ಸಮೇತ.	500	0	0
55.	ಬೆಳ್ಳೀ ಜಪಮಣಿ ಜೊತೆ 2 ತೂಕ ಹುವ್ವು 14ಕ್ಕೆ ಮೇಲೆ ಭಂಗಾರದ ಕುಸರಿ ಹಚ್ಚಿದೆ ..	30	0	0

ಬಟ್ಟೆ ಮತ್ತು ಕಾಗದ ಪತ್ರಗಳು ಸುಟ್ಟು ಹೋದ ಬಾಬತು.

56. ಮತಿ 2, ಲೀರೆ 2, ಪಟ್ಟು ಚವಕ 1, ಕೆಲವು ಕಾಗದ ಪತ್ರಗಳು 'ಈ ಮೇರಿಗೆ ಕಳ್ಳರು ಬಿಟ್ಟು ಬಿಟ್ಟು ದ್ದಾರೆಂತಲೂ, ಜ್ಞಾಪಕ ಯಿದ್ದ ಮಟ್ಟಿಗೆ ಮಾಲುಗಳು ಬರಸಿದೇನೆಂತಲೂ ಫಿರ್ಯಾದಿ ಸುಬ್ಬರಾಯ ಹೇಳುತ್ತಾನೆ. ಇ

ಜುಮ್ಲಾ 4,076 0 0

ನೋಟೀಸ್.

ಈ ಮೇಲ್ಕಂಡ ಮಾಲ್ ಯಾರು ಪತ್ತೆಗೆ ತರುತ್ತಾರೊ ಅವರಿಗೆ ಕೀಕಡಾ 100 ರೂಪಾಯಿ ದೂಲಿಗೆ 10 ರೂಪಾಯಿನಂತೆ ಇನ್ಆಂ ಕೊಡುವದಾಗಿ ಫಿರ್ಯಾದಿ ಸುಬ್ಬರಾಯ ವಪ್ಪ ಅರ್ಜಿ ಬರದುಕೊಂಡಿದ್ದಾನೆ.

ಸೈದ್ ನಸಿರುದ್ದೀನ್,
ಫಾರ್ ಡಿಪ್ಯುಟಿ ಕಮ್ಮಿಷನರ್,

ತಾರೀಖು 1ನೇ ಜನವರೀ 1885.

ಇದರಿಂದ ತಿಳಿಸುವದೇನಂದರೆ, ಶಿವಮೊಗ್ಗಾ ಜೈಲಿನಲ್ಲಿ ಖೈದು ಮಾಡಲ್ಪಟ್ಟಿರುವ ಖೈದಿಗಳ ವುಪಯೋಗದ ಬಗ್ಯೆ ಸ್ಯ 1885ನೇ ಇಸವಿ ಏಪ್ರಿಲ್ ಗುರ್ಯೇ ತಾರೀಖು ಮೊದಲು 1886ನೇ ಮಾರ್ಚೀ 31ನೇ ತಾರೀಖಿನವರಿಗೆ ಎರಡು ರಿನಗಳೂ ಸೇರಿ ಕೀಕಾದ ಆಹಾರ ವ ಗೈರೇ ದರೋಬಸ್ತು ಜಿನಸುಗಳನ್ನೂ ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಬರುವ ಬಂದು ಮಾಡಲ್ಪಟ್ಟ ದರಖಾಸ್ತುಗಳನ್ನು ಶಿವಮೊಗ್ಗಾ ಜೈಲ್ ಸೂಪರ್ಟಿಂಡೆಂಟರವರು, ಜೈಲ್‌ಗಳ ಇನ್‌ಸ್ಪೆಕ್ಟರ್ ಜನರಲ್ಲವರಿಂದ ಕಾಯಂ ಮಾಡಲ್ಪಡಲಿಕ್ಕೆ ಗುರಿಯಾಗಿ ಸ್ಯ 1885ನೇ ಇಸವಿ ಮಾರ್ಚೀ 1ನೇ ತಾರೀಖು ವರಿಗೆ ತೆಗದುಕೊಳ್ಳುವರು.

2. ಸದರೀ ತಾರೀಖು ತರುವಾಯ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡುವದಿಲ್ಲ.

3. "ಶಿವಮೊಗ್ಗಾ ಜೈಲ್‌ಗಾಗಿ ಆಹಾರ ಪದಾರ್ಥಗಳ ಸರಬರಾಯಿ ಬಗ್ಯೆ ದರಖಾಸ್ತುಗಳು" ಯೆಂಬದಾಗಿ ದರಖಾಸ್ತುಗಳ ಮೇಲೆ ಬರದು ಕಳುಹಿಸತಕ್ಕದ್ದು.

4. 500 ರೂಪಾಯಿಗಳು ನಗದಾಗಿ ಅಥವಾ ಕರ್ಣಾಟ ನೋಟಿಗಳ ಮೂಲಕ ತಿಪಾಜಿಟ್ಟಿನೀ ಕಳುಹಿಸಲ್ಪಟ್ಟ ಜೊತ್ತು ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಶಿವಮೊಗ್ಗಾ ಡಿಸ್ಟ್ರಿಕ್ಟು ಜೈಲ್ ಆಫೀಸಿನಲ್ಲಿ ಹಾಜರಾಗಲಿಕ್ಕೆ ಇಷ್ಟಪಟ್ಟಳ್ಳ ದರಖಾಸ್ತುದಾರರ ರೂಬರೂ ಮೇಲ್ಕಂಡ ತಾರೀಖಿನೊಳಗೆ ಶಿವಮೊಗ್ಗಾ ಡಿಸ್ಟ್ರಿಕ್ಟು ಜೈಲ್ ಸೂಪರ್ಟಿಂಡೆಂಟರವರಿಂದ ಖುಲ್ಲಾ ಮಾಡಲ್ಪಡುವವು.

6. ಯಾವುದಾದ್ದು ದರಖಾಸ್ತುಗಳಲ್ಲಿಯೂ, ಈ ಕೆಳಗೆ ನಮೂದಿಸುವ ಪ್ರಮಾಣದ ಪ್ರತಿ ಖೈದಿಗೂ ದಿನ ಬಂದಕ್ಕೆ ಆಗತಕ್ಕ ದರವು ನಮೂದಿಸಲ್ಪಡತಕ್ಕದ್ದು.